# All India Radio: Bangalore
# National Bulletin In Kannada
# 04.03.2026  19.35 p.m.
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಪಶ್ಚಿಮ ಏಷ್ಯಾ ಸಂಘರ್ಷ ಉಲ್ಬಣ; ಮುಂದುವರೆದ ಇಸ್ರೇಲ್-ಇರಾನ್ ಪರಸ್ಪರ ದಾಳಿ

೨. ಕೊಲ್ಲಿ ರಾಷ್ಟ್ರಗಳ ಪರಿಸ್ಥಿತಿ ಹಿನ್ನೆಲೆಯಲ್ಲಿ ಭಾರತದಿಂದ ನಿಯಂತ್ರಣ ಕೊಠಡಿ ಹಾಗೂ ತುರ್ತು ಸಹಾಯವಾಣಿ ಸ್ಥಾಪನೆ

೩. ಭಾರತ-ಫಿನ್‌ಲ್ಯಾಂಡ್ ದ್ವಿಪಕ್ಷೀಯ ಸಂಬಂಧ ಬಲವರ್ಧನೆಗೆ ಉಭಯ ನಾಯಕರ ಆಸಕ್ತಿ

೪. ಭೌಗೋಳಿಕ ಆರ್ಥಿಕತೆ ಕುರಿತಾದ ರೈಸಿನಾ ಸಂವಾದ ೨೦೨೬ ನಾಳೆ ದೆಹಲಿಯಲ್ಲಿ ಆರಂಭ

೫. ಐಸಿಸಿ ಟಿ-೨೦ ವಿಶ್ವಕಪ್ ಕ್ರಿಕೆಟ್; ಫೈನಲ್ಸ್ ತಲುಪಲು ದಕ್ಷಿಣ ಆಫ್ರಿಕಾ-ನ್ಯೂಜಿಲೆಂಡ್ ಹಣಾಹಣಿ

***************

ಪಶ್ಚಿಮ ಏಷ್ಯಾ ಸಂಘರ್ಷ ಉಲ್ಬಣಗೊಂಡಿದೆ. ಇಸ್ರೇಲ್ ಪಡೆಗಳು ಇರಾನಿನ ಆಳ್ವಿಕೆ ಇರುವ ಟೆಹರಾನಿನ ಆಂತರಿಕ ಭದ್ರತಾ ಸೇನಾ ಕೇಂದ್ರ ಹಾಗೂ ಬಸೀಜಿ ಮೇಲೆ ಸರಣಿ ದಾಳಿ ನಡೆಸಿವೆ. ಈ ಸೇನಾ ಕೇಂದ್ರಗಳು ಇರಾನಿನ ಸಂಪೂರ್ಣ ಆಡಳಿತ ನಿರ್ವಹಣೆಯ ಕೇಂದ್ರಗಳಾಗಿವೆ ಎಂದು ಇಸ್ರೇಲ್ ರಕ್ಷಣಾ ಪಡೆ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದೆ.

ಇಸ್ರೇಲ್ ಇರಾನಿನ ಕ್ಷಿಪಣಿ ಲಾಂಚರ್ ಹಾಗೂ ಇತರ ವ್ಯವಸ್ಥೆಗಳ ಮೇಲೆ ದಾಳಿ ಮಾಡಿದೆ. ವಾಯು ರಕ್ಷಣಾ ವ್ಯವಸ್ಥೆಯನ್ನು ಬಳಸುತ್ತಿದ್ದ ಇರಾನಿನ ಸೈನಿಕರನ್ನು ನಿಷ್ಕ್ರಿಯಗೊಳಿಸಿರುವುದಾಗಿ ಇಸ್ರೇಲ್ ತಿಳಿಸಿದೆ.

ಇರಾನ್‌ನಲ್ಲಿ ಫೆಬ್ರವರಿ ೨೮ ರಿಂದ ಇದುವರೆಗೆ ೧ ಸಾವಿರದ ೯೭ ನಾಗರಿಕರು ಮೃತಪಟ್ಟಿರುವುದಾಗಿ ಅಮೆರಿಕಾದಲ್ಲಿ ಇರುವ ಮಾನವ ಹಕ್ಕು ಕಾರ್ಯಕರ್ತರ ಸುದ್ದಿ ಏಜನ್ಸಿ - ಎಚ್‌ಆರ್‌ಎಎನ್‌ಎ ತಿಳಿಸಿದೆ.

ಇಸ್ರೇಲ್ ವಾಯುಪಡೆ ಬೈರೂತ್‌ನಲ್ಲಿರುವ ಹೆಜ್‌ಬುಲ್ಲಾ ಮೂಲಸೌಕರ್ಯಗಳ ಮೇಲೆ ದಾಳಿ ಆರಂಭಿಸಿದೆ. ಇಸ್ರೇಲ್‌ನ ರಕ್ಷಣಾ ಸಚಿವ ಕಜ್ ಅವರು ಇರಾನಿನ ಮುಂದಿನ ನಾಯಕರಾಗಿ ಯಾರೇ ಆಯ್ಕೆಯಾದರೂ ಅವರನ್ನು ಗುರಿಯಾಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಮಧ್ಯೆ ಅಮೆರಿಕಾದ ಸೆಂಟ್ರಲ್ ಕಮಾಂಡ್‌ನ ಅಡ್ಮಿರಲ್ ಬ್ರಾಡ್ ಕೂಪರ್, ಅಮೆರಿಕಾ ದಾಳಿಯನ್ನು ನಿಲ್ಲಿಸುವುದಿಲ್ಲ ಹಾಗೂ ಇರಾನಿನ ತಿರುಗೇಟು ನೀಡುವ ಸಾಮರ್ಥ್ಯ ಕಡಿಮೆಯಾಗುತ್ತಿದೆ ಎಂದು ಹೇಳಿದ್ದಾರೆ. ಆಪರೇಷನ್ ಎಫಿಕ್ ಫ್ಯೂರಿ ಬಗ್ಗೆ ವಿವರ ನೀಡಿದ ಅಡ್ಮಿರಲ್ ಬ್ರಾಡ್ ಕೂಪರ್, ಅಮೆರಿಕಾ ಕಾರ್ಯಾಚರಣೆ ಆರಂಭಿಸಿದ ೧೦೦ ತಾಸಿಗಳ ಒಳಗೆ ೨ ಸಾವಿರಕ್ಕೂ ಅಧಿಕ ಗುರಿಗಳ ಮೇಲೆ ಆಕ್ರಮಣ ನಡೆಸಿದೆ. ಇರಾನಿನ ವಾಯುರಕ್ಷಣಾ ವ್ಯವಸ್ಥೆ ತೀವ್ರ ಹಾನಿಗೀಡಾಗಿದೆ. ನೂರಾರು ಬೆಲೆಸ್ಟಿಕ್ ಕ್ಷಿಪಣಿ, ಲಾಂಚರ್ ಹಾಗೂ ಡ್ರೋನ್‌ಗಳನ್ನು ನಾಶಪಡಿಸಲಾಗಿದೆ ಎಂದು ಹೇಳಿದ್ದಾರೆ.

ಆಪರೇಷನ್ ಎಫಿಕ್ ಫ್ಯೂರಿ ಕಾರ್ಯಾಚರಣೆಯಲ್ಲಿ ತೊಡಗಿದ್ದ ತನ್ನ ನಾಲ್ವರು ಸೈನಿಕರು ಕುವೈತ್‌ನಲ್ಲಿ ಮೃತಪಟ್ಟಿದ್ದಾರೆ ಎಂದು ಅಮೆರಿಕಾದ ಯುದ್ಧ ಇಲಾಖೆ ತಿಳಿಸಿದೆ.

ಮತ್ತೊಂದೆಡೆ, ಯುನೈಟೆಡ್ ಕಿಂಗ್‌ಡಮ್ ಹಾಗೂ ಫ್ರಾನ್ಸ್ ಸೈಪ್ರಸ್‌ನಲ್ಲಿ ಯುದ್ಧ ನೌಕೆ ಹಾಗೂ ವಾಯುರಕ್ಷಣಾ ಸೌಕರ್ಯಗಳನ್ನು ನಿಯೋಜಿಸಲು ಆರಂಭಿಸಿವೆ. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್‌ಮರ್, ಸೈಪ್ರಸ್ ಸಂರಕ್ಷಣೆಗೆ ಹಾಗೂ ಅಲ್ಲಿ ನೆಲೆಸಿರುವ ಬ್ರಿಟಿಷ್ ಸೈನಿಕ ಸಿಬ್ಬಂದಿಯ ಹಿತಾಸಕ್ತಿ ಕಾಪಾಡಲು ಬದ್ಧವಿರುವುದಾಗಿ ಹೇಳಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಇಮಾನ್ಯುಯಲ್ ಮ್ಯಾಕ್ರಾನ್, ಫ್ರಾನ್ಸಿನ ವಾಯು ನೌಕೆಗಳಿಗೆ ಮೆಡಿಟರೇನಿಯನ್‌ಗೆ ತೆರಳುವಂತೆ ಸೂಚಿಸಿದ್ದಾರೆ.

****************

ಇರಾನಿನ ಇಸ್ಲಾಮಿಕ್ ರೆವಲ್ಯೂಷನ್ ಗಾರ್ಡ್ಸ್ ಕೋರ್-ಐಆರ್‌ಜಿಸಿ ಅಮೆರಿಕಾ ಹಾಗೂ ಇಸ್ರೇಲ್ ಗುರಿಯಾಗಿಸಿಕೊಂಡು ಪ್ರತಿ ದಾಳಿ ಆರಂಭಿಸಿದೆ ಎಂದು ಪ್ರೆಸ್ ಟಿವಿ ವರದಿ ಮಾಡಿದೆ. ಐಆರ್‌ಜಿಸಿ, ಅಮೆರಿಕಾ-ಇಸ್ರೇಲ್ ಜಂಟಿ ದಾಳಿಗೆ ಪ್ರತ್ಯುತ್ತರವಾಗಿ ಮೂರು ಪ್ರಮುಖ ಕಾರ್ಯಾಚರಣೆಗಳನ್ನು ಆರಂಭಿಸಿದೆ.

ಆಪರೇಷನ್ ಟ್ರೂ ಪ್ರಾಮಿಸ್-೪ ಕಾರ್ಯಾಚರಣೆ ಮೂಲಕ ಎರ್ಬಿಲ್ ಮತ್ತು ಕುವೈತ್‌ನಲ್ಲಿರುವ ಅಮೆರಿಕಾ ವಾಯುನೆಲೆಯತ್ತ ಅನೇಕ ಡ್ರೋನ್‌ಗಳ ಅಲೆಗಳನ್ನೇ ಹರಿಯಬಿಟ್ಟಿದೆ. ತಾನು ಕೈಗೊಂಡ ಪ್ರತಿಕ್ರಿಯಾತ್ಮಕ ದಾಳಿಯಿಂದ ಬಹರೇನ್‌ನಲ್ಲಿರುವ ಅಮೆರಿಕಾ ವಾಯುನೆಲೆಗೆ ಅಪಾರ ಪ್ರಮಾಣದ ಹಾನಿಯುಂಟಾಗಿದೆ ಎಂದು ಐಆರ್‌ಜಿಸಿ ಹೇಳಿಕೊಂಡಿದೆ.

ಸಂಘರ್ಷದ ಮೊದಲ ಎರಡು ದಿನಗಳಲ್ಲಿ ವಿವಿಧ ನೆಲೆಗಳಲ್ಲಿ ಇರುವ ಅಮೆರಿಕಾ ಸೇನೆಯ ೬೮೦ಕ್ಕೂ ಹೆಚ್ಚು ಸೈನಿಕರು ಮೃತಪಟ್ಟಿದ್ದಾರೆ ಎಂದು ಇರಾನ್ ಹೇಳಿಕೊಂಡಿದೆ. ಅಮೆರಿಕಾ ನೆಲೆಗಳ ಮೇಲೆ ತಾನು ನಡೆಸುತ್ತಿರುವ ಪ್ರತಿದಾಳಿ ಸ್ವರಕ್ಷಣೆಯ ಹಕ್ಕಾಗಿದೆ ಎಂದು ಇರಾನ್ ಪ್ರತಿಪಾದಿಸಿದೆ.

****************

ಇರಾನ್ ನ್ಯೂಕ್ಲಿಯರ್ ಬಾಂಬ್ ಅನ್ನು ನಿರ್ಮಿಸುತ್ತಿರುವ ಬಗ್ಗೆ ಯಾವುದೇ ಸಾಕ್ಷ್ಯ ಇಲ್ಲ ಎಂದು ಅಂತಾರಾಷ್ಟ್ರೀಯ ಅಣುಶಕ್ತಿ ಏಜನ್ಸಿ-ಐಎಇಎ ಯ ಮಹಾ ನಿರ್ದೇಶಕ ರಫೇಲ್ ಮಾರಿಯಾನೋ ಗ್ರೋಸಿ ಹೇಳಿದ್ದಾರೆ.

ಇರಾನ್ ಬಳಿ ಅಗಾಧ ಪ್ರಮಾಣದಲ್ಲಿರುವ ಶಸ್ತ್ರಾಸ್ತ್ರ ಮಟ್ಟದ ಯುರೇನಿಯಂ ಹಾಗೂ ಅವುಗಳ ಸಂಪೂರ್ಣ ಪರಿಶೀಲನೆಗೆ ನಿರಾಕರಿಸುತ್ತಿರುವುದು ಗಂಭೀರ ಕಳವಳಕ್ಕೆ ಕಾರಣವಾಗಿದೆ ಎಂದು ಗ್ರೋಸಿ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಇರಾನಿನ ಅಣುಶಕ್ತಿ ಕಾರ್ಯಕ್ರಮ ಕುರಿತ ತಮ್ಮ ವರದಿಯನ್ನು ಪ್ರಸ್ತಾಪಿಸಿರುವ ರಫೇಲ್ ಮಾರಿಯಾನೋ ಗ್ರೋಸಿ, ಸಂರಕ್ಷಣೆಯ ಕುರಿತಾದ ಬಾಕಿ ಸಂದೇಹಗಳನ್ನು ಪರಿಹರಿಸುವಲ್ಲಿ ಇರಾನ್ ಸಹಾಯ ಮಾಡುವವರೆಗೂ ಇರಾನಿನ ಅಣುಶಕ್ತಿ ಕಾರ್ಯಕ್ರಮ ಶಾಂತಿ ಉದ್ದೇಶಗಳಿಂದ ಕೂಡಿದೆ ಎಂದು ಖಾತರಿಪಡಿಸಲು ಐಎಇಎಗೆ ಸಾಧ್ಯವಾಗುವುದಿಲ್ಲ ಎಂದು ತಿಳಿಸಿದ್ದಾರೆ.

****************

ಶ್ರೀಲಂಕಾದ ಗಲ್ಲೆ ದಕ್ಷಿಣ ಕರಾವಳಿಯಿಂದ ಸುಮಾರು ೪೦ ನಾವಿಕ ಮೈಲು ದೂರದಲ್ಲಿ ಸಂಕಷ್ಟದಲ್ಲಿ ಸಿಲುಕಿದ್ದ ಇರಾನಿನ ಯುದ್ಧ ನೌಕೆಗೆ ನೆರವಾಗಲು ಶ್ರೀಲಂಕಾ ಮುಂದಾಗಿದೆ.

ಶ್ರೀಲಂಕಾ ಇದಕ್ಕಾಗಿ ಹಡಗು ಮತ್ತು ವಾಯು ನೌಕೆಗಳನ್ನು ನಿಯೋಜಿಸಿದ್ದು, ಇರಾನ್ ಯುದ್ಧ ನೌಕೆಯ ೩೦ ಸಿಬ್ಬಂದಿ ಸೇರಿದಂತೆ ಇದುವರೆಗೆ ಒಟ್ಟು ೧೮೦ ನಾವಿಕರನ್ನು ರಕ್ಷಿಸಲಾಗಿದೆ ಎಂದು ಶ್ರೀಲಂಕಾದ ವಿದೇಶಾಂಗ ಖಾತೆ ರಾಜ್ಯ ಸಚಿವ ವಿಜಿತಾ ಹೇರತ್ ತಿಳಿಸಿದ್ದಾರೆ.

****************

ಪಶ್ಚಿಮ ಏಷ್ಯಾ ಮತ್ತು ಕೊಲ್ಲಿ ವಲಯದಲ್ಲಿ ಉಂಟಾಗಿರುವ ಪ್ರಸ್ತುತ ಪರಿಸ್ಥಿತಿ ಹಿನ್ನೆಲೆಯಲ್ಲಿ ಭಾರತದ ವಿದೇಶಾಂಗ ವ್ಯವಹಾರ ಸಚಿವಾಲಯ ನಿಯಂತ್ರಣ ಕೊಠಡಿ ಸ್ಥಾಪಿಸಿದೆ. ದೂರವಾಣಿ ಸಂಖ್ಯೆ ಇಂತಿದೆ ೧೮೦೦೧೧೮೭೯೭, ೦೧೧-೨೩೦೧ ೨೧೧೩, ೦೧೧-೨೩೦೧ ೪೧೦೪ ಮತ್ತು ೦೧೧-೨೩೦೧ ೭೯೦೫ ಬೆಳಗ್ಗೆ ೯ ರಿಂದ ಸಂಜೆ ೯ರವರೆಗೆ ಸಂಪರ್ಕಿಸಬಹುದಾಗಿದೆ.

ಇದಲ್ಲದೇ, ಸಂಘರ್ಷ ಪೀಡಿತ ವಲಯಗಳಲ್ಲಿ ಸುರಕ್ಷತೆ ಮತ್ತು ತೆರವು ಸಾಧ್ಯತೆಗಳಿಗಾಗಿ ದಿನವಿಡಿ ಕಾರ್ಯನಿರ್ವಹಿಸುವ ತುರ್ತು ಸಹಾಯವಾಣಿಗಳನ್ನು ಸ್ಥಾಪಿಸಲಾಗಿದೆ.

****************

ಭಾರತ-ಫಿನ್‌ಲ್ಯಾಂಡ್ ದ್ವಿಪಕ್ಷೀಯ ಸಂಬಂಧ ಬಲಪಡಿಸಿಕೊಳ್ಳುವ ಬಗ್ಗೆ ಉತ್ಸಾಹ ವ್ಯಕ್ತಪಡಿಸಿವೆ. ಭಾರತಕ್ಕೆ ಇಂದು ಬೆಳಗ್ಗೆ ಅಧಿಕೃತ ಪ್ರವಾಸಕ್ಕಾಗಿ ಆಗಮಿಸಿದ ಫಿನ್‌ಲ್ಯಾಂಡ್ ಅಧ್ಯಕ್ಷ ಅಲೆಗ್ಸಾಂಡರ್ ಸ್ಟಬ್, ತಮ್ಮ ಭೇಟಿ ವಾಣಿಜ್ಯ ವಹಿವಾಟು ಸೇರಿದಂತೆ ಉಭಯ ದೇಶಗಳ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಫಿಲ್‌ಲ್ಯಾಂಡ್ ಅಧ್ಯಕ್ಷರನ್ನು ಸ್ವಾಗತಿಸಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ, ಅಲೆಗ್ಸಾಂಡರ್ ಸ್ಟಬ್ ಅವರ ಭೇಟಿ ಉಭಯ ದೇಶಗಳ ಸಂಬಂಧಗಳನ್ನು ಹೆಚ್ಚಿನ ಎತ್ತರಕ್ಕೆ ಕೊಂಡೊಯ್ಯಲಿದೆ ಎಂದು ಹೇಳಿದ್ದಾರೆ.

ನಾಳೆ ಅವರೊಂದಿಗಿನ ಭೇಟಿಗಾಗಿ ಕಾತುರದಿಂದ ಕಾಯುತ್ತಿರುವುದಾಗಿ ಹಾಗೂ ರೈಸಿನಾ ಸಂವಾದ ೨೦೨೦ರ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸ್ಟಬ್ ಅವರ ಪ್ರಧಾನ ಭಾಷಣಕ್ಕಾಗಿ ಎದುರು ನೋಡುತ್ತಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

****************

ಈ ಮಧ್ಯೆ ನವದೆಹಲಿಯಲ್ಲಿ ನಾಳೆ ಆರಂಭವಾಗಲಿರುವ ೧೧ನೇ ರೈಸಿನಾ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಭೂತಾನಿನ ವಿದೇಶಾಂಗ ವ್ಯವಹಾರ ಖಾತೆ ಸಚಿವ ದೀನಾ ನಾತ್ ದುಂಗ್ಯೆಲ್ ಹಾಗೂ ಮಾಲ್ಡಾದ ಉಪಪ್ರಧಾನಮಂತ್ರಿ ಹಾಗೂ ವಿದೇಶಾಂಗ ವ್ಯವಹಾರ ಖಾತೆ ಸಚಿವ ಇವಾನ್ ಬೋರ್ಗ್ ಭಾರತಕ್ಕೆ ಇಂದು ಆಗಮಿಸಿದರು.

ಭಾರತ-ಭೂತಾನ್ ನಡುವಿನ ಸಹಭಾಗಿತ್ವ ಪರಸ್ಪರ ನಂಬಿಕೆಗಳಿಂದ ರೂಪುಗೊಂಡಿದೆ ಎಂದು ವಿದೇಶಾಂಗ ವ್ಯವಹಾರ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಭಾರತ-ಮಾಲ್ಟಾ ಸ್ನೇಹಪೂರಿತ ಹಾಗೂ ಹಾರ್ದಿಕ ಸಂಬಂಧಗಳನ್ನು ಹೊಂದಿವೆ ಎಂದು ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ಭೌಗೋಳಿಕ ಆರ್ಥಿಕತೆ ಕುರಿತಾದ ರೈಸಿನಾ ಸಂವಾದ ೨೦೨೬ ಕಾರ್ಯಕ್ರಮ ಇದೇ ಶನಿವಾರದವರೆಗೆ ನಡೆಯಲಿದೆ.

****************

ಭಾರತದ ಮೂರು ಪ್ರಮುಖ ವಿದೇಶಾಂಗ ಕಾರ್ಯಕ್ರಮಗಳಲ್ಲಿ ಮ್ಯಾನ್ಮಾರ್ ಆದ್ಯತೆಯ ಸ್ಥಾನ ಪಡೆದಿದೆ ಎಂದು ವಿದೇಶಾಂಗ ವ್ಯವಹಾರ ಖಾತೆ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ. ಸರ್‌ಸೊ ಬೈಕ್‌ಮನ್ ಸಾಹಿತ್ಯ ಕೇಂದ್ರ ಭವನದ ಉದ್ಘಾಟನಾ ಸಂದರ್ಭದಲ್ಲಿ ಮಾತನಾಡಿದ ಡಾ.ಜೈಶಂಕರ್, ಈ ಕೇಂದ್ರ ಉಭಯ ದೇಶಗಳ ನಿಕಟ ಸಂಬಂಧದ ಪ್ರತೀಕವಾಗಿದೆ ಎಂದರು. ಈ ಕೇಂದ್ರ ಮ್ಯಾನ್ಮಾರ್‌ನ ಶಾಸ್ತ್ರೀಯ ಹಾಗೂ ಜಾನಪದ ಸಾಹಿತ್ಯದ ಸಂರಕ್ಷಣೆ ಮತ್ತು ಅಧ್ಯಯನಕ್ಕೆ ಬೆಂಬಲ ನೀಡಲಿದೆ ಎಂದರು.

****************

ಮಹಾರಾಷ್ಟ್ರದಿಂದ ರಾಜ್ಯಸಭೆಗೆ ನಡೆಯಲಿರುವ ದ್ವೈವಾರ್ಷಿಕ ಚುನಾವಣೆಗಾಗಿ ಭಾರತೀಯ ಜನತಾ ಪಾರ್ಟಿ ನಾಲ್ಕು ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ. ಕೇಂದ್ರ ಸಚಿವ ರಾಮ್‌ದಾಸ್ ಅಠಾವಳೆ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ, ಮಯ ಚಿಂತಮಾನ್ ಐವ್‌ನಾತೆ ಮತ್ತು ರಾಮ್‌ರಾವ್ ವಾಡ್‌ಕುಟೆ ಬಿಜೆಪಿ ಅಭ್ಯರ್ಥಿಗಳಾಗಿದ್ದಾರೆ.

****************

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಅಶ್ಮೋಲಿನ್ ಪ್ರಾಚ್ಯವಸ್ತು ಸಂಗ್ರಹಾಲಯ, ಭಾರತದ ಸಂತ ತಿರುಮಾಂಕೈ ಆಳ್ವಾರ್ ಅವರ ೧೬ನೇ ಶತಮಾನದ ಕಂಚಿನ ಪ್ರತಿಮೆಯನ್ನು ವಾಪಸ್ಸು ಮಾಡಿದೆ. ೧೯೬೭ರಲ್ಲಿ ಸೂತೆಬೆನಲ್ಲಿ ನಡೆದ ಹರಾಜಿನಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಂಗ್ರಹಾಲಯ ಈ ಪ್ರತಿಮೆಯನ್ನು ಪಡೆದುಕೊಂಡಿತ್ತು. ಇದೀಗ ಈ ಪ್ರತಿಮೆಯನ್ನು ಅದರ ಮೂಲಸ್ಥಳವಾದ ತಮಿಳುನಾಡಿನ ತಡಿಕೊಂಬುವಿನ ಶ್ರೀ ಸೌಂದರ್‌ರಾಜ ಪೆರುಮಾಳ್ ದೇವಸ್ಥಾನಕ್ಕೆ ತರಲಾಗುತ್ತಿದೆ. ಅಮೆರಿಕಾದ ಇಂಡಿಯಾ ಹೌಸ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರತಿಮೆಯನ್ನು ಅಧಿಕೃತವಾಗಿ ಹಸ್ತಾಂತರಿಸಲಾಯಿತು.

****************

ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿಂದು ನಡೆಯುತ್ತಿರುವ ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಟಾಸ್ ಗೆದ್ದಿರುವ ನ್ಯೂಜಿಲೆಂಡ್ ತಂಡ ಬೌಲಿಂಗ್ ಆಯ್ದುಕೊಂಡಿದೆ. ಇತ್ತೀಚಿನ ವರದಿ ಬಂದಾಗ ದಕ್ಷಿಣ ಆಫ್ರಿಕಾ ತಂಡ ೫.೧ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ४೬ ರನ್ ಗಳಿಸಿ ಆಡುತ್ತಿದೆ.

****************

ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿಂದು ರೂಪಾಯಿ ಬೆಲೆ ಅಮೆರಿಕಾ ಡಾಲರ್ ಎದುರು ೬೭ ಪೈಸೆಯಷ್ಟು ಕುಸಿದು ೯೨ ರೂಪಾಯಿ ೧४ ಪೈಸೆಗೆ ಮುಕ್ತಾಯಗೊಂಡಿದೆ. ದಿನದೊಳಗಿನ ವಹಿವಾಟು ಕುರಿತಾದ ಡಾಲರ್ ಸೂಚ್ಯಂಕ ೯೮.೭४ ರಷ್ಟಿತ್ತು.

********ಮುಕ್ತಾಯ********